I/14760/2023

ಕರ್ನಾಟಕ Government ಸರ್ಕಾರ of karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
Phone - 080 26980100
Fax - 080 26422377
ಡಿಎಸ್‌ಇಆರ್‌ಟಿ DSERT

ಸಂಖ್ಯೆ:E-4967 DSERT/EVG/ರ.ಸು.ಕು/34/2017-18 ದಿನಾಂಕ: 30-08-2023

**ಜ್ಞಾಪನ**

ವಿಷಯ: ರಸ್ತೆ ಸುರಕ್ಷತೆ ಗೀತೆ ಮತ್ತು ಪೋಸ್ಟರ್ ಗಳನ್ನು ಡಯಟ್ ವೆಬ್ ಸೈಟ್‌ನಲ್ಲಿ UPLOAD ಮಾಡಿ ಹೆಚ್ಚಿನ ಪ್ರಚಾರ ನೀಡುವ ಕುರಿತು,

ಉಲ್ಲೇಖ: 01. ಶ್ರೀ ಸಂಜಯ್ ಕುಮಾರ್ I.A.S ಕಾರ್ಯದರ್ಶಿಗಳು, ಶಿಕ್ಷಣ ಸಚಿವಾಲಯ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಭಾರತ ಸರ್ಕಾರ ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: 10-44/2022-Sch.4 ದಿನಾಂಕ: 03-08-2023

02. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರ, ರವರ ಇ-ಮೇಲ್ ಪತ್ರ ದಿನಾಂಕ: 07-08-2023

*******

ವಿಷಯಕ್ಕೆ ಸಂಬಂಧಿಸಿದಂತೆ, ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ರಸ್ತೆ ಸುರಕ್ಷತೆಯು ತೀವ್ರ ಸವಾಲಾಗಿರುತ್ತದೆ, ಈ ಹಿನ್ನೆಲೆಯಲ್ಲಿ ಶಾಲಾ ವಲಯದ ಸುರಕ್ಷತೆಯ ಸಮಸ್ಯೆ ಮತ್ತು ರಸ್ತೆ ಸುರಕ್ಷತೆಯ ಜಾಗೃತಿಗೆ ಸಂಬಂಧಿಸಿದಂತೆ, International Road Federation India Chapter – (IRF-IC) ಶ್ರಮಿಸುತ್ತಿದ್ದು, **5E** ಕಾರ್ಯಕ್ರಮದ ಮೂಲಕ ರಸ್ತೆ ಸುರಕ್ಷತೆ ಮಿಷನ್ ನ್ನು ಅನುಸರಿಸುತ್ತಿದ್ದಾರೆ. IRF-IC ಸಂಸ್ಥೆಯು ಶಾಲಾ ವಲಯದ ಸುರಕ್ಷತಾ ಕಾರ್ಯಕ್ರಮದ ಪ್ರಸ್ತುತ ಅಭಿವೃದ್ಧಿಯೊಂದಿಗೆ ರಸ್ತೆ ಸುರಕ್ಷತಾ ಗೀತೆ, ರಸ್ತೆ ಸುರಕ್ಷತಾ ಪೋಸ್ಟರ್‌ಗಳು, ಕಿರುಚಿತ್ರಗಳ ಮೂಲಕ ಶಾಲಾ ಜಾಗೃತಿ ಕಾರ್ಯಕ್ರಮಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಸಮಾಜ ಮತ್ತು ಭವಿಷ್ಯದ ನಾಗರಿಕರ ಸುಧಾರಣೆಗಾಗಿ ಶಕ್ತಿಗಳನ್ನು ಸಂಯೋಜಿಸುವ ನಿಟ್ಟಿನಲ್ಲಿ ಮಕ್ಕಳು/ಶಾಲಾ ವಿದ್ಯಾರ್ಥಿಗಳಲ್ಲಿ ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಮೂಡಿಸಲು ಅಗತ್ಯವಿರುವ ರಸ್ತೆ ಸುರಕ್ಷತೆ ಗೀತೆ ಮತ್ತು ಪೋಸ್ಟರ್ ಗಳನ್ನು ರಾಜ್ಯಾದಾದ್ಯಂತ ಶಾಲೆಗಳಲ್ಲಿ ಅಳವಡಿಸಿಕೊಳ್ಳುವಂತೆ ಉಲ್ಲೇಖ-1 ರಲ್ಲಿ ತಿಳಿಸಲಾಗಿದೆ.

ರಸ್ತೆ ಸುರಕ್ಷತೆಯ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ಮಕ್ಕಳಿಗಾಗಿ ಸಿದ್ದಪಡಿಸಿರುವ ರಸ್ತೆ ಸುರಕ್ಷತೆ ಗೀತೆಯು ಒಂದು ನಿಮಿಷದ ಆಕರ್ಷಕ ಗೀತೆಯಾಗಿದ್ದು, 23 ಪ್ರಮುಖ ಭಾರತೀಯ ಭಾಷೆಗಳಲ್ಲಿದೆ. ದೈನಂದಿನ ಶಾಲಾ ಅಸೆಂಬ್ಲಿಗಳಲ್ಲಿ ಈ ಗೀತೆಯನ್ನು ನುಡಿಸಿದಾಗ ರಸ್ತೆ ಸುರಕ್ಷತೆ ಬಗೆಗಿನ ಸದರಿ ಗೀತಾ ಸಂದೇಶವನ್ನು ಮಕ್ಕಳು ಅರ್ಥೈಸಿಕೊಳ್ಳಲು ಸಹಕಾರಿಯಾಗಿದೆ. ಅದೇ ರೀತಿ ಪೋಸ್ಟರ್ ಗಳು ದೃಶ್ಯಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಮಕ್ಕಳ ನಿರಂತರ ಗಮನವನ್ನು ಕೇಂದ್ರೀಕರಿಸಲು ಪ್ರಭಾವ ಬೀರುತ್ತವೆ. ಆದ್ದರಿಂದ ತಮ್ಮ ಜಿಲ್ಲಾ ವ್ಯಾಪ್ತಿಯ ಎಲ್ಲಾ ಸರ್ಕಾರಿ, ಅನುದಾನ ಮತ್ತು ಅನುದಾನ ರಹಿತ ಶಾಲೆಗಳು ತಮ್ಮ ನಿಯತಕಾಲಿಕಗಳು ಮತ್ತು ಜರ್ನಲ್ ಗಳು ಮತ್ತು ಸೂಚನಾ ಫಲಕಗಳಲ್ಲಿ ರಸ್ತೆ ಸುರಕ್ಷತೆ ಗೀತೆ ಮತ್ತು ಪೋಸ್ಟರ್‌ಗಳನ್ನು ಅಳವಡಿಸುವ ಮೂಲಕ ಹೆಚ್ಚು ಜಾಗೃತಿ ಮೂಡಿಸಲು ತಿಳಿಸಲಾಗಿದೆ.

ಉಲ್ಲೇಖಿತ ಪತ್ರವನ್ನು ಈ ಪತ್ರದೊಂದಿಗೆ ಅನುಬಂಧಿಸುತ್ತಾ, ರಸ್ತೆ ಸುರಕ್ಷತೆ ಗೀತೆ ಮತ್ತು ಪೋಸ್ಟರ್‌ಗಳನ್ನು ಡಯಟ್ ವೆಬ್ ಸೈಟ್‌ನಲ್ಲಿ UPLOAD ಮಾಡುವ ಮೂಲಕ ಮಕ್ಕಳಲ್ಲಿ ಈ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ಅಗತ್ಯ ಕ್ರಮವಹಿಸುವಂತೆ ತಿಳಿಸಿದೆ.

**ರಸ್ತೆ ಸುರಕ್ಷತೆ ಗೀತೆಯ ಲಿಂಕ್**
https://drive.google.com/file/d/1RRgy3uQfB6wwXvcfsPm4fzUzpCiE3oF2/view?usp=drive_web

Signed by Sumangala V
Date: 01-09-2023 14:13:21

ನಿರ್ದೇಶಕರು
ಡಿ.ಎಸ್. ಇ.ಆರ್.ಟಿ
ಬೆಂಗಳೂರು

**ರವರಿಗೆ,**
ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.